ಸಹೃದಯತೆ ಅವರ ಮೇಲೆ ಪ್ರಭಾವ ಬೀರಿದೆ. ವಿಮರ್ಶಾ ಬರಹಗಳಲ್ಲಿ ಸಾಹಿತ್ಯ ಮೌಲ್ಯಗಳನ್ನು ಎತ್ತಿ ತೋರಿಸುವುದು ಅವರ ವಿಮರ್ಶಾ ಕ್ರಮ. ಇಂಗ್ಲಿಷ್ ಅಥವಾ ಕನ್ನಡ - ಯಾವುದೇ ಸಾಹಿತ್ಯದ ಬಗೆಗೆ ಬರೆಯುವಾಗಲೂ ಕಥೆಯನ್ನು ನಿರೂಪಿಸುತ್ತಾ ಅವರು ಕೃತಿ ಕಾಣಿಸುವ ಜೀವನ ಮೌಲ್ಯಗಳನ್ನು ವಿವರಿಸುತ್ತಾರೆ. ಮ್ಯಾಥ್ಯೂ ಆರ್ನಲ್ಡನ 'ಡೋವರ್ ಬೀಚ್' ಕವನವನ್ನು ವಿವರಿಸುತ್ತಾ ಅವರು ತೋರಿಸಿಕೊಡುವುದು ಮಾನವ ಪ್ರೀತಿಯ ಅಗತ್ಯವನ್ನು, ಸಮುದ್ರದಲ್ಲಿ ನಡೆದ ಜೀವವಿರೋಧಿಯಾಗಿರುವ ಇಂಗ್ಲಿಷ್-ಫ್ರೆಂಚ್ ನಾವಿಕ ಪಡೆಯ ಯುದ್ಧವನ್ನು ನೆನಪಿಸಿಕೊಳ್ಳುತ್ತಾ, ಸಮುದ್ರ ದಡದಲ್ಲಿ ಕುಳಿತಿರುವ ನಲ್ಲ ನಲ್ಲೆಯರ ಮೂಲಕ ಮಾನವ ಪ್ರೇಮದಲ್ಲಿ ಕಾಣಬಹುದಾದ, ನೆಮ್ಮದಿಯನ್ನು ಕವಿ ಆರ್ನಲ್ಡನು ಸೂಚಿಸುತ್ತಾನೆ ಎಂಬುದನ್ನು ಅವರು ವಿವರಿಸುತ್ತಾರೆ. ಅಂತಹ ಮೌಲ್ಯಗಳನ್ನು ವಿವರಿಸಿ ತಿಳಿಸುವುದು ವಿಮರ್ಶೆ ಮಾಡಬೇಕಾದ ಕೆಲಸವೆಂದು ಶೇಷಗಿರಿರಾಯರ ಅಭಿಪ್ರಾಯ. ಹಾಗೆಯೇ ಅಗತ್ಯ ಬಿದ್ದಲ್ಲಿ ಅವರು ವಿಮರ್ಶೆಯಲ್ಲಿ ರೂಪಕಗಳನ್ನು ಬಳಸಲೂ ಹಿಂದೆಗೆಯುವುದಿಲ್ಲ. ನೇರ ವಿವರಣೆಯಷ್ಟು ರೂಪಕ ವಿಧಾನ ವಿಮರ್ಶೆಗೆ ಸಹಕಾರಿಯಲ್ಲ ಎಂಬ ಮಾತನ್ನು ಅವರು ಸಂಪೂರ್ಣ ಅನುಮೋದಿಸುವುದಿಲ್ಲ. ಆದುದರಿಂದಲೇ ಬಹುಶಃ ಟಿ.ಎಸ್. ವೆಂಕಣ್ಣಯ್ಯನವರ ಬಗ್ಗೆ ಬರೆದ ಲೇಖನವನ್ನು ಎಲ್‌ಎಸ್‌ಎಸ್ ಪ್ರಾರಂಭಿಸುವುದು - "ಹಲವು ದೀಪಗಳನ್ನು ಹಚ್ಚಿ ಅವುಗಳ ಪ್ರಭೆಯಲ್ಲಿ ತಾನು ಹಿಂದೆ ನಿಂತ ದೀಪ ತಳುಕಿನ ವೆಂಕಣ್ಣಯ್ಯನವರು" ಎಂಬ ಮಾತಿನಿಂದ.

ಎಲ್.ಎಸ್. ಶೇಷಗಿರಿರಾಯರು ಬರವಣಿಗೆಯಲ್ಲಿ ಸುಲಭ ಸಂವಹನ, ಸ್ವೋಪಜ್ಞತೆ ಹಾಗೂ ಸಮತೋಲನಗಳಿಗೆ ಪ್ರಾಶಸ್ತ್ಯ ನೀಡಿದರು. ಆದುದರಿಂದಲೇ ಪತ್ರಿಕೆಗಳ ಅಂಕಣಗಳ ಮೂಲಕ ಅವರು ಸಾಕಷ್ಟು ವಿಮರ್ಶಾ ಲೇಖನಗಳನ್ನು ಬರೆದರು. ಮಾಸ್ತಿಯವರು ಸಂಪಾದಕರಾಗಿ ಹೊರತರುತ್ತಿದ್ದ 'ಜೀವನ' ಪತ್ರಿಕೆಯಿಂದಲೇ ಅವರ ಸಾಹಿತ್ಯ ಪತ್ರಿಕಾ ಬರಹಗಳು-ಅಂಕಣಗಳು ಪ್ರಾರಂಭವಾಗುತ್ತವೆ. ಆ ಬಳಿಕ ಅವರು 'ಪ್ರಜಾಮತ' ವಾರಪತ್ರಿಕೆಯಲ್ಲಿ 'ಸಹಚಿಂತನ' ಹಾಗೂ ತುಷಾರ ಮಾಸಪತ್ರಿಕೆಯಲ್ಲಿ 'ಸಾಹಿತ್ಯ ಚಿಂತನ' ಅಂಕಣಗಳನ್ನು ಬರೆದರು.

'ಕನ್ನಡಪ್ರಭ' ದಿನಪತ್ರಿಕೆಗಾಗಿ ಅವರು 'ಪಾಶ್ಚಾತ್ಯ ಸಾಹಿತ್ಯ ವಿಹಾರ' ಎಂಬ ಅಂಕಣ ಬರೆದು ಕನ್ನಡ ಓದುಗರಿಗೆ ಸಮಗ್ರ ಪಾಶ್ಚಾತ್ಯ ಸಾಹಿತ್ಯವನ್ನು ಪರಿಚಯಿಸಿದರು. ಅವರ 'ಇಂಗ್ಲಿಷ್ ಸಾಹಿತ್ಯ ಚರಿತ್ರೆ' ಎಂಬ ಕನ್ನಡ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2001) ಸಂದಿದೆ ಎಂಬುದು ಅವರು ಮಾಡಿದ ಕೆಲಸದ ಪ್ರಾಮುಖ್ಯತೆಯನ್ನು ಹೇಳುತ್ತದೆ. ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಎನ್.ಎಸ್. ಶ್ರೀಧರಮೂರ್ತಿ ಅವರು ಬರೆದ 'ಪ್ರೊ. ಎಲ್.ಎಸ್. ಶೇಷಗಿರಿರಾವ್ ಬದುಕು ಮತ್ತು ಸಾಹಿತ್ಯ' ಎಂಬ ಕೃತಿಯನ್ನು ಪ್ರಕಟಿಸಿತ್ತು. ಮೊನೋಗ್ರಾಫ್ ರೂಪದ ಆ ಪುಸ್ತಕದಲ್ಲಿ ಸ್ವತಃ ಪತ್ರಿಕೋದ್ಯೋಗಿಯೂ ಆಗಿರುವ ಶ್ರೀಧರಮೂರ್ತಿ ಅವರು, ಶೇಷಗಿರಿರಾಯರು ತಮ್ಮ ಬರಹಗಳಲ್ಲಿ ಸಾಹಿತ್ಯ ಸಂವಹನಕ್ಕೆ ನೀಡಿದ ಪ್ರಾಮುಖ್ಯತೆ ಹಾಗೂ ಅವರ ಪತ್ರಿಕಾ ಅಂಕಣಗಳ ಸಾಹಿತ್ಯ-ಸಾಂಸ್ಕೃತಿಕ ಮಹತ್ವವನ್ನು ಚರ್ಚಿಸಿದ್ದಾರೆ. ವಿಮರ್ಶಾ ಸಂವಹನದ ದೃಷ್ಟಿಯಿಂದ ಅವರ ಅಂಕಣ ಬರಹಗಳಿಗೆ ವಿಶೇಷ ಮಹತ್ವವಿದೆ.

ಶೇಷಗಿರಿರಾಯರು ತಮ್ಮ ವಿಮರ್ಶಾ ಬರಹಗಳಲ್ಲಿ ಆಕೃತಿ ಕೇಂದ್ರಿತ ಚರ್ಚೆಯನ್ನಾಗಲೀ ಯಾವುದೋ ಒಂದು ತಾತ್ವಿಕತೆ ಪರವಾದ ನಿಲುವನ್ನಾಗಲೀ ತಾಳದೆ ಇರಬಹುದು. ಆದರೆ ಅವರು ಎಲ್ಲವನ್ನೂ ಮೆಚ್ಚುವ ಅಥವಾ ಹೊಗಳುವ ನೆಲೆಗೂ ಹೋಗುವುದಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಮಾಲೆಯಲ್ಲಿ ಪ್ರಕಟವಾದ ಅವರ 'ಹೊಸಗನ್ನಡ ಸಾಹಿತ್ಯ' ಕೃತಿಯಲ್ಲಿರುವ ಪ್ರಗತಿಶೀಲರ ಬಗೆಗಿನ ಬರಹ ಇದಕ್ಕೊಂದು ಉತ್ತಮ ಉದಾಹರಣೆ. ಅವರು ತಮ್ಮ ತಾರುಣ್ಯದಲ್ಲಿ ಅಂದಿನ ಸಮಕಾಲೀನ ಪ್ರಗತಿಶೀಲ ಸಾಹಿತ್ಯ ಚಳವಳಿಯಲ್ಲಿ ಸಕ್ರಿಯವಾಗಿದ್ದವರು. ಆದರೂ ಅವರು, 'ಪ್ರಗತಿಶೀಲ ಸಾಹಿತ್ಯದ ಸಾಧನೆಗೆ ಮಿತಿಯನ್ನು ಕಲ್ಪಿಸಿದ ಎರಡು ಅಂಶಗಳೆಂದರೆ ಕಲಾಸೃಷ್ಟಿಯ ಅಂತರದ ನಷ್ಟ ಮತ್ತು ಅನುಭವದ ಸರಳೀಕರಣ' ಎಂಬ ಅಂಶವನ್ನು ಉದಾಹರಣೆಗಳೊಂದಿಗೆ ವಿವರಿಸಿ ವಿಶದೀಕರಿಸುತ್ತಾರೆ.

ಶೇಷಗಿರಿರಾಯರು ಕನ್ನಡ ಬರೆಯಲು ಪ್ರಾರಂಭಿಸಿದ ಹಿನ್ನೆಲೆಯಲ್ಲೊಂದು ಕಥೆಯಿದೆ. ಅವರು ಸೆಂಟ್ರಲ್